# <u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 09.10.2020ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2020ನೇ ಸಾಲಿನ ಐದನೇ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತ ಸದಸ್ಯರು:**

1. **ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ** — **ಅಧ್ಯಕ್ಷರು**
   ಕುಲಪತಿಗಳು
   ಮಂಗಳೂರು ವಿಶ್ವವಿದ್ಯಾನಿಲಯ,
   **ಮಂಗಳಗಂಗೋತ್ರಿ–574 199.**

2. **ಡಾ. ಅಪ್ಪಾಜಿ ಗೌಡ, ಎಸ್. ಬಿ,** — ಸದಸ್ಯರು
   ಜಂಟಿ ನಿರ್ದೇಶಕರು
   ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ,
   **ಮಂಗಳೂರು – 560 001.**
   (ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ)

3. **ಪ್ರೊ. ಡಿ. ಶಿವಲಿಂಗಯ್ಯ,** — – " –
   ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಹಾಗೂ ಪ್ರಾಧ್ಯಾಪಕರು
   ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ
   ಮಂಗಳೂರು ವಿಶ್ವವಿದ್ಯಾನಿಲಯ,
   **ಮಂಗಳಗಂಗೋತ್ರಿ–574 199.**

4. **ಪ್ರೊ. ಕರುಣಾಕರ್ ಎ. ಕೋಟೆಗಾರ್,** — – " –
   **ಶ್ರೀ ಅಣ್ಣಪ್ಪ,**
   ಆರ್.ಪಿ.ನಗರ, ಇಂದ್ರಾಳಿ ದೇವಸ್ಥಾನದ ಹತ್ತಿರ
   **ಉಡುಪಿ – 576 012.**

5. **ಶ್ರೀ. ರವಿಚಂದ್ರ ಪಿ. ಎಂ.** — – " –
   ನಂ.103, ಪೂಜನ್ ಎನ್‌ಕ್ಲೇವ್
   6ನೇ ಅಡ್ಡ ರಸ್ತೆ, ಗಾಂಧಿ ನಗರ, ಮಣ್ಣಗುಡ್ಡೆ,
   **ಮಂಗಳೂರು – 575 001.**

6. **ಡಾ. ಮಧುಸೂಧನ್ ಭಟ್,** — – " –
   ಪ್ರಾಂಶುಪಾಲರು,
   ಉಪೇಂದ್ರ ಪೈ ಮೆಮೋರಿಯಲ್ ಕಾಲೇಜು,
   ಕುಂಜಿಬೆಟ್ಟು, **ಉಡುಪಿ – 576 102.**

**_2,**

**7. ಪ್ರೊ. ಶ್ರೀವರ್ಮ ಅಜ್ರಿ ಎಂ,** – " –
ಪ್ರಾಂಶುಪಾಲರು,
ಮಂಜುನಾಥ ಪೈ ಮೆಮೋರಿಯಲ್
ಸರಕಾರಿ ಪ್ರಥಮ ದರ್ಜೆ ಕಾಲೇಜು,
**ಕಾರ್ಕಳ – 574 104.**

**8. ಶ್ರೀಮತಿ ಕಸ್ತೂರಿ ಜೆ. ಶೆಟ್ಟಿ,** – " –
ಪ್ರಾಂಶುಪಾಲರು,
ಶ್ರೀದೇವಿ ಕಾಲೇಜ್ ಆಫ್ ಫ್ಯಾಶನ್ ಡಿಸೈನ್,
ಬಲ್ಲಾಳ್‌ಬಾಗ್, **ಮಂಗಳೂರು – 575 003.**

**9. ಡಾ. ಎಂ. ಎಸ್. ತಳವಾರ,** – " –
ನಂ 777, "ಜೇನುಗೂಡು"
ಬನಶಂಕರಿ, 6ನೇ ಹಂತ, 5ನೇ ಬ್ಲಾಕ್,
ಮೆಟ್ಟಕಲ್ಲಪಾಳ್ಯ, **ಬೆಂಗಳೂರು – 560 085.**

**10. ಶ್ರೀ ಕೆ. ರಮೇಶ,** – " –
ನಂ. 1004, ಮಹಾಬಲೇಶ್ವರ ಕ್ಲಾಸಿಕ್ ರೂಬಿ,
ವಾಟರ್ ಟ್ಯಾಂಕ್ ಎದುರುಗಡೆ,
ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಹತ್ತಿರ, ಶಕ್ತಿನಗರ,
**ಮಂಗಳೂರು – 575 016.**

**11. ಡಾ. ಪಾರ್ವತಿ ಅಪ್ಪಯ್ಯ,** – " –
"ಹಿಮವನ" ಮುಳಿಯಾ ಬಡಾವಣೆ
ಎಫ್.ಎಂ.ಕೆ.ಎಂ.ಸಿ. ಕಾಲೇಜು ಹಿಂಭಾಗ,
ಮಡಿಕೇರಿ ಅಂಚೆ, **ಕೊಡಗು ಜಿಲ್ಲೆ**

**12. ಶ್ರೀ ಮೋಹನ್ ಪಡಿವಾಳ್,** – " –
"ಸಮ್ಮೇಧ" ಎಂ.ಎಸ್. ನಗರ,
11ನೇ ಅಡ್ಡರಸ್ತೆ, ತೆಲ್ಲಾರ್ ರಸ್ತೆ,
ಕಾರ್ಕಳ, **ಉಡುಪಿ ಜಿಲ್ಲೆ – 574 104.**

**13. ಶ್ರೀ ವಿವೇಕಾನಂದ ಪನಿಯಾಲ,** – " –
ಪನಿಯಾಲ ಹೌಸ್, ಕೊಡಿಯಾಳ ಗುತ್ತು
ಕೊಡಿಯಾಲ್ ಬೈಲು ಪೂರ್ವ ಮುಖ್ಯರಸ್ತೆ,
**ಮಂಗಳೂರು – 575004.**

14. **ಶ್ರೀ ರವೀಂದ್ರನಾಥ ರೈ, ವಕೀಲರು,** – " –
ಬಿನ್ ದಿ. ಕ್ಯಾಪ್ಟನ್ ಬಾಲಕೃಷ್ಣ ರೈ. ಬಿ. ಎಸ್.
"ಲಕ್ಷ್ಮೀ ನಿವಾಸ" 3ನೇ ಕ್ರಾಸ್, ಕೊಡಿಯಾಳ್‌ಗುತ್ತು ಪೂರ್ವ,
ಕೊಡಿಯಾಲ್ ಬೈಲ್ ಅಂಚೆ, **ಮಂಗಳೂರು – 3.**

**_3,**



15. **ಶ್ರೀ ಸಿಪ್ರಿಯನ್ ಮೊಂತೆರೊ,** – " –
ಪ್ರಾಂಶುಪಾಲರು,
ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ,
ದಕ್ಷಿಣ ಕನ್ನಡ ಜಿಲ್ಲೆ, **ಮಂಗಳೂರು – 575 001.**
(ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ)

16. **ಪ್ರೊ. ಪಿ. ಎಲ್. ಧರ್ಮ,**
ಕುಲಸಚಿವರು (ಪರೀಕ್ಷಾಂಗ) – " –
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199**

17. **ಕೆ. ರಾಜು ಮೊಗವೀರ, ಕೆ.ಎ.ಎಸ್,** ಸದಸ್ಯ ಕಾರ್ಯದರ್ಶಿ
ಕುಲಸಚಿವರು (ಆಡಳಿತ)
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199**

**ವಿಶೇಷ ಆಹ್ವಾನಿತರು:**

18. **ಪ್ರೊ. ಬಿ. ನಾರಾಯಣ,**
ಹಣಕಾಸು ಅಧಿಕಾರಿ (ಪ್ರಭಾರ)
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199.**

**ಅನುಪಸ್ಥಿತ ಸದಸ್ಯರು:**

1. **ತಾಂತ್ರಿಕ ಶಿಕ್ಷಣ ನಿರ್ದೇಶಕರು,** **ಸದಸ್ಯರು**
ಕರ್ನಾಟಕ ರಾಜ್ಯ
ಅರಮನೆ ರಸ್ತೆ, **ಬೆಂಗಳೂರು – 560 001.**

2. **ಡಾ. ಮನೋಹರ್ ವಿನ್ಸೆಂಟ್ ಸೆರಾವೊ,** – " –
ಪ್ರಾಂಶುಪಾಲರು,
ಸಂತ ಅಲೋಶಿಯಸ್ ಸಂಧ್ಯಾ ಕಾಲೇಜು,
**ಮಂಗಳೂರು – 575 003.**

**3. ವೈದ್ಯಕೀಯ ಶಿಕ್ಷಣ ನಿರ್ದೇಶಕರು,** – " –
ಕರ್ನಾಟಕ ರಾಜ್ಯ, ಆನಂದರಾವ್ ವೃತ್ತ
**ಬೆಂಗಳೂರು – 560 009.**

**4. ನಿರ್ದೇಶಕರು,** – " –
ಪದವಿ ಪೂರ್ವ ಶಿಕ್ಷಣ ಇಲಾಖೆ
ಪದವಿ ಪೂರ್ವ ಶಿಕ್ಷಣ ಭವನ,
18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ
ಮಲ್ಲೇಶ್ವರಂ, **ಬೆಂಗಳೂರು 560 003.**

*********

# <u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 09.10.2020ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2020ನೇ ಸಾಲಿನ ಐದನೇ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು**

**ಅನುಪಸ್ಥಿತರು**

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

IQAC ಸಲಹಾ ಸಮಿತಿ ಸಭೆಯ ನಡಾವಳಿ ಹಾಗೂ 2018–19ರ ಕರಡು AQAR ರ ಪ್ರಸ್ತಾವನೆಗೆ ಸಂಬಂಧಿಸಿ, ದಿನಾಂಕ 25.09.2020 ರಂದು ನಡೆದ ಸಿಂಡಿಕೇಟು ಸಭೆಯ ನಿರ್ಣಯದಂತೆ, IQAC ನಿರ್ದೇಶಕರಾದ ಪ್ರೊ. ಕಿಶೋರಿ ನಾಯಕ್ ಕೆ. ಇವರನ್ನು power point presentation ಗಾಗಿ ಆಹ್ವಾನಿಸಲಾಯಿತು. ಅದರಂತೆ ನಿರ್ದೇಶಕರು 2018–19ನೇ ಸಾಲಿನ ವಿಶ್ವವಿದ್ಯಾನಿಲಯದ ಸಾಧನೆಗಳು ಮತ್ತು ವಿಶ್ವವಿದ್ಯಾನಿಲಯದ ಸವಾಲುಗಳ ಬಗ್ಗೆ ವಿಸ್ತೃತ ವಿವರಗಳನ್ನು ಪ್ರಸ್ತುತ ಪಡಿಸಿದರು.

## I. ನಡವಳಿಗಳ ದೃಢೀಕರಣ

ದಿನಾಂಕ 25.09.2020ರಂದು ನಡೆದ 2020ನೇ ಸಾಲಿನ **ಚತುರ್ಥ ಸಾಮಾನ್ಯ ಸಭೆಯ** ನಡವಳಿಯ ದೃಢೀಕರಣ.

ದಿನಾಂಕ 25.09.2020ರಂದು ನಡೆದ 2020ನೇ ಸಾಲಿನ **ಚತುರ್ಥ ಸಾಮಾನ್ಯ ಸಭೆಯ** ನಡವಳಿಯನ್ನು ಈ ಕೆಳಗಿನ ತಿದ್ದುಪಡಿಗಳೊಂದಿಗೆ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ:ಸಾ.ಸ.4:14(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (National Education Policy) ಯನ್ನು ಅಳವಡಿಸಿಕೊಳ್ಳುವ ಬಗ್ಗೆ.

**ತಿದ್ದುಪಡಿ ನಿರ್ಣಯ:** ರಾಷ್ಟ್ರೀಯ ಶಿಕ್ಷಣ ನೀತಿ–2020 ರ ಬಗ್ಗೆ ಮಾನ್ಯ ಕುಲಪತಿಗಳು ಸುಧೀರ್ಘವಾಗಿ ವಿವರಣೆ ನೀಡಿದರು. ರಾಷ್ಟ್ರೀಯ ಶಿಕ್ಷಣ ನೀತಿ–2020 ನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪರಿಣಾಮಕಾರಿಯಾಗಿ ಅಳವಡಿಸುವ ಬಗ್ಗೆ ಮತ್ತು ಇದರ ಬಗ್ಗೆ ತಮ್ಮ ಕನಸುಗಳನ್ನು ಮಾನ್ಯ ಕುಲಪತಿಗಳು ಸಭೆಯ ಮುಂದೆ ಪ್ರಸ್ತುತ ಪಡಿಸಿದರು. ದೇಶದಲ್ಲಿ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇದೊಂದು ಅಮೂಲಾಗ್ರ ಬದಲಾವಣೆ. ರಾಷ್ಟ್ರೀಯ ಶಿಕ್ಷಣ ನೀತಿ– 2020 ನ್ನು ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನ ಮಾಡುವಲ್ಲಿ ನಮ್ಮ ಮಂಗಳೂರು ವಿಶ್ವವಿದ್ಯಾನಿಲಯವು ಪ್ರಥಮ ಸ್ಥಾನದಲ್ಲಿರಬೇಕೆಂದು ತಮ್ಮ ಆಶಯವನ್ನು ವ್ಯಕ್ತಪಡಿಸಿದರು. ಈ ನೀತಿಯು ಶಿಕ್ಷಣ ಮತ್ತು ಉದ್ಯೋಗಕ್ಕೆ ಕೇಂದ್ರೀಕೃತವಾಗಿದ್ದು, ಇದರ ಕಾರ್ಯವ್ಯಾಪ್ತಿ ಮತ್ತು ಉದ್ದೇಶಗಳ ಬಗ್ಗೆ ವಿಸ್ತೃತವಾಗಿ ವಿವರಿಸಿದರು.

Task Force ಗೆ ಸಂಬಂಧಿಸಿ, ಒಟ್ಟು ಒಂಭತ್ತು ಸಿಂಡಿಕೇಟಿನ ಉಪಸಮಿತಿಗಳನ್ನು

ರಚಿಸಲು ನಿರ್ಣಯಿಸಲಾಯಿತು.

1. ಶೈಕ್ಷಣಿಕ ಸುಧಾರಣಾ ಸಮಿತಿ (Academic Reforms Committee)
2. ಪರೀಕ್ಷಾಂಗ ಸುಧಾರಣಾ ಸಮಿತಿ (Examination Reforms Committee)
3. ಹಣಕಾಸು ಸುಧಾರಣಾ ಸಮಿತಿ (Finance Reforms Committee)
4. ಅಭಿವೃದ್ಧಿ ಸುಧಾರಣಾ ಸಮಿತಿ (Development Reforms Committee)
5. ಮಾನವ ಸಂಪನ್ಮೂಲ ಸುಧಾರಣಾ ಸಮಿತಿ (Human Resources Reforms Committee)
6. ಬಾಹ್ಯ ಚಟುವಟಿಕೆಗಳ ಸುಧಾರಣಾ ಸಮಿತಿ (Extension and Outreach activities Committee)
7. ಕ್ರೀಡೆ ಮತ್ತು ಸಾಂಸ್ಕೃತಿಕ ಸುಧಾರಣಾ ಸಮಿತಿ (Sports and Cultural Policy Committee)
8. ನ್ಯಾಕ್, ರ್‍ಯಾಂಕಿಂಗ್, ಬ್ರಾಂಡಿಂಗ್ ಮತ್ತು ಪ್ರಸಾರಾಂಗ ಸುಧಾರಣಾ ಸಮಿತಿ (NAAC/Ranking/Branding/Publication committee)
9. ಆಡಳಿತಾ ಸುಧಾರಣಾ ಸಮಿತಿ (Administrative Reforms committee)

ಮೇಲ್ಕಂಡ ಉಪಸಮಿತಿಗಳಿಗೆ ಈ ಕೆಳಗಿನ ಸಿಂಡಿಕೇಟು ಸದಸ್ಯರುಗಳನ್ನು ಅಧ್ಯಕ್ಷರುಗಳನ್ನಾಗಿ ನಾಮನಿರ್ದೇಶನ ಮಾಡಲಾಯಿತು.

| | | |
|---|---|---|
| 1. ಶೈಕ್ಷಣಿಕ ಸುಧಾರಣಾ ಸಮಿತಿ | – | ಪ್ರೊ. ಕರುಣಾಕರ್ ಎ. ಕೋಟೆಗಾರ್ |
| 2. ಪರೀಕ್ಷಾಂಗ ಸುಧಾರಣಾ ಸಮಿತಿ | – | ಡಾ. ಎಂ. ಎಸ್. ತಳವಾರ್ |
| 3. ಹಣಕಾಸು ಸುಧಾರಣಾ ಸಮಿತಿ | – | ಶ್ರೀ ಮೋಹನ್ ಪಡಿವಾಳ್ |
| **4. ಅಭಿವೃದ್ಧಿ ಸುಧಾರಣಾ ಸಮಿತಿ** | **–** | **ಶ್ರೀ ರವಿಚಂದ್ರ ಪಿ. ಎಂ.** |
| 5. ಮಾನವ ಸಂಪನ್ಮೂಲ ಸುಧಾರಣಾ ಸಮಿತಿ | – | ಕುಲಪತಿಗಳಿಂದ ನಾಮನಿರ್ದೇಶಿತರಾದ ಡೀನರು |
| 6. ಬಾಹ್ಯ ಚಟುವಟಿಕೆಗಳ ಸುಧಾರಣಾ ಸಮಿತಿ | – | ಶ್ರೀ ಕೆ. ರಮೇಶ್ |
| 7. ಕ್ರೀಡೆ ಮತ್ತು ಸಾಂಸ್ಕೃತಿಕ ಸುಧಾರಣಾ ಸಮಿತಿ | – | ಶ್ರೀ ರವೀಂದ್ರನಾಥ ರೈ |
| 8. ನ್ಯಾಕ್, ರ್‍ಯಾಂಕಿಂಗ್, ಬ್ರಾಂಡಿಂಗ್ ಮತ್ತು ಪ್ರಸಾರಾಂಗ ಸುಧಾರಣಾ ಸಮಿತಿ | – | ಡಾ. ಪಾರ್ವತಿ ಅಪ್ಪಯ್ಯ |
| 9. ಆಡಳಿತಾ ಸುಧಾರಣಾ ಸಮಿತಿ | – | ಶ್ರೀ ವಿವೇಕಾನಂದ ಪನಿಯಾಲ |

**ಗೌರವಾನ್ವಿತ ಕುಲಪತಿಗಳು Task Force ನ ಅಧ್ಯಕ್ಷರಾಗಿದ್ದು, ಉಪಸಮಿತಿಗಳ ಅಧ್ಯಕ್ಷರುಗಳೆಲ್ಲರೂ Task Force ನ ಸದಸ್ಯರುಗಳಾಗಿರುತ್ತಾರೆ. Task Force ಗೆ ಈ ಕೆಳಗಿನ ತಜ್ಞರು** (Honorary Advisors)ಗಳನ್ನು ಗೌರವಾನ್ವಿತ ಸಲಹೆಗಾರರನ್ನಾಗಿ ನೇಮಿಸಿಕೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು.

1. ಪ್ರೊ. ಪಿ. ವಿ. ಕೃಷ್ಣ ಭಟ್
2. ಪ್ರೊ. ಚ. ನ. ಶಂಕರರಾವ್
3. ಪ್ರೊ. ಬಿ. ಎ. ವಿವೇಕ ರೈ

ಸದರಿ ಸಮಿತಿಗಳಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ನಿಕಾಯಗಳ ಡೀನರುಗಳು, ಶೈಕ್ಷಣಿಕ ಮಂಡಳಿ ಸದಸ್ಯರುಗಳು, ಯೋಜನೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ, IQAC, ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರುಗಳು, Mangala Alumni Association, MUTA, AMUCT ಇವುಗಳ ಪ್ರತಿನಿಧಿಗಳು, ಕುಲಸಚಿವರು (ಪರೀಕ್ಷಾಂಗ) ಮತ್ತು ಹಣಕಾಸು ಅಧಿಕಾರಿ ಇವರುಗಳನ್ನು ಸಮಿತಿಗಳ ಅಗತ್ಯಕ್ಕೆ ತಕ್ಕಂತೆ ವಿಶೇಷ ಆಹ್ವಾನಿತರುಗಳನ್ನಾಗಿ ಸಭೆಗಳಿಗೆ ಆಹ್ವಾನಿಸುವಂತೆ ಕ್ರಮ ಕೈಗೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು.

ಸಿಂಡಿಕೇಟು ಸದಸ್ಯರಾದ ಪ್ರೊ. ಕರುಣಾಕರ ಎ. ಕೋಟೆಗಾರ್ ಇವರು ಈ ಬಗ್ಗೆ ಪೂರಕವಾದ ವಿವರಣೆಗಳನ್ನು ನೀಡಿದರು. ಇದರ ಬಗ್ಗೆ 2 ಹಂತಗಳಲ್ಲಿ ಒಂದು ದಿನದ ಕಾರ್ಯಾಗಾರವನ್ನು ವಿಶ್ವವಿದ್ಯಾನಿಲಯದಲ್ಲಿ ನಡೆಸಿ, ಮೂರು ತಿಂಗಳಿಗೊಮ್ಮೆ ವರದಿಯನ್ನು ಪರಿಶೀಲಿಸಬೇಕೆಂದು ತಿಳಿಸಲಾಯಿತು. ಅಂತಿಮವಾಗಿ ಈ ಬಗ್ಗೆ ವಿವಿಧ ಸಮಿತಿಗಳನ್ನು ರಚಿಸಿ, ರಾಷ್ಟ್ರೀಯ ಶಿಕ್ಷಣ ನೀತಿ–2020 (National Education Policy-2020) ಯನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪರಿಣಾಮಕಾರಿಯಾಗಿ ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ಣಯಿಸಲಾಯಿತು. ಸಮಿತಿಗಳನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ:ಸಾ.ಸ.4:22(2020**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕ ನೇಮಕಾತಿ / ಹುದ್ದೆಯ ಪ್ರಭಾರವನ್ನು ನೀಡುವ ಬಗ್ಗೆ.

**ತಿದ್ದುಪಡಿ ನಿರ್ಣಯ:** ಡಾ. ಮಂಜುಳಾ ಶಾಂತಾರಾಮ್, ಪ್ರಾಧ್ಯಾಪಕರು, ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, "ಜ್ಞಾನಕಾವೇರಿ", ಚಿಕ್ಕ ಅಳುವಾರ ಇವರಿಗೆ ಮುಂದಿನ ಆರು ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ **(ಯಾವುದು ಮೊದಲೋ ಅಲ್ಲಿಯವರೆಗೆ)** ವಿದ್ಯಾರ್ಥಿ ಕ್ಷೇಮಪಾಲನೆಯ ನಿರ್ದೇಶಕರ ಪ್ರಭಾರವನ್ನು ನೀಡಬಹುದೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಪ.ಜಾ.ಪ.ಪಂ. ಘಟಕ ಸಾ.ಸ.4:21(2020)**

**ವಿಷಯ:** ಪರಿಶಿಷ್ಟ ಜಾತಿ / ಪಂಗಡದ ದ್ವಿತೀಯ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ವಿತರಿಸಲು M/s. Keonics ಸಂಸ್ಥೆಯವರಿಂದ ಲ್ಯಾಪ್‌ಟಾಪ್ **ಖರೀದಿಸಿದ** ಬಗ್ಗೆ. (ಕಾರ್ಯಸೂಚಿಯ ವಿಷಯದಲ್ಲಿ ಸೂಕ್ತ ತಿದ್ದುಪಡಿ ಮಾಡಲು ಸೂಚಿಸಲಾಗಿದೆ.)

**ತಿದ್ದುಪಡಿ ನಿರ್ಣಯ:** ದಿನಾಂಕ 25.09.2020 ರ ನಿರ್ಣಯದಲ್ಲಿ ಸದರಿ ನಿರ್ಣಯವನ್ನು ಮುಂದೂಡಲಾಯಿತು ಎಂದು ದಾಖಲಿಸಿ, ದಿನಾಂಕ 09.10.2020ರ ಸಿಂಡಿಕೇಟು ಸಭೆಯು ಈ ಕೆಳಗಿನ ನಿರ್ಣಯವನ್ನು ನೀಡಿರುತ್ತದೆ.

M/s. Keonics ಸಂಸ್ಥೆಯವರಿಂದ ಖರೀದಿಸಿದ ಲ್ಯಾಪ್‌ಟಾಪ್‌ಗಳ ಒಟ್ಟು ಮೊತ್ತದಲ್ಲಿ 75% ಮೊತ್ತವನ್ನು ಪಾವತಿಸಲು ಸಿಂಡಿಕೇಟು ಷರತ್ತುಬದ್ಧ ಒಪ್ಪಿಗೆ ನೀಡಿರುತ್ತದೆ. ಬಾಕಿ 25% ಮೊತ್ತವನ್ನು ನೀಡುವ ಮೊದಲು ಈ ಪ್ರಕ್ರಿಯೆಯಲ್ಲಿ ಲೋಪ ಎಸಗಿದ ಅಧಿಕಾರಿಗಳನ್ನು ಗುರುತಿಸಿ, ಸೂಕ್ತ ಕ್ರಮಕೈಗೊಳ್ಳಲು ಮತ್ತು ಪೂರೈಕೆ ಪ್ರಕ್ರಿಯೆಯ ಪೂರೈಕೆದಾರ ಸಂಸ್ಥೆಯು ಟೆಂಡರ್ ಪ್ರಕ್ರಿಯೆಯನ್ನು ಪಾಲಿಸದಿದ್ದಲ್ಲಿ, ಬಾಕಿ 25% ಮೊತ್ತವನ್ನು ಮೊಟಕುಗೊಳಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟ್:ಸಾ.ಸ.4:23(2020)**

**ವಿಷಯ:** ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟು ಸದಸ್ಯರು, ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು.

1. ಕೊಡವ Diploma / Certificate and Advanced Diploma ಕೋರ್ಸುಗಳನ್ನು ಕಾಲೇಜುಗಳಲ್ಲಿ ಅಳವಡಿಸುವ ಬಗ್ಗೆ.

**ತಿದ್ದುಪಡಿ ನಿರ್ಣಯ:** ಕೊಡವ Certificate, Diploma, Advanced Diploma add-on ಕೋರ್ಸುಗಳು ಮತ್ತು ಪಿ. ಜಿ. ಡಿಪ್ಲೋಮಾ ಕೋರ್ಸುಗಳನ್ನು ಕಾಲೇಜುಗಳಲ್ಲಿ ಅಳವಡಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

## II. ಅನುಸರಣಾ ವರದಿಯ ಅನುಮೋದನೆ

ದಿನಾಂಕ 30.07.2020ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ **ತೃತೀಯ ಸಾಮಾನ್ಯ ಸಭೆಯ** ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

**ಅನುಮೋದಿಸಲಾಯಿತು.**

ಸಿಂಡಿಕೇಟು ಸಭೆಗಳ ನಿರ್ಣಯಗಳಿಗೆ ಸಂಬಂಧಿಸಿ, ಅನುಸರಣಾ ವರದಿಯನ್ನು ನೀಡುವಾಗ ಸಂಬಂಧಿತ ವಿಷಯದ ಅಧಿಸೂಚನೆ/ಸುತ್ತೋಲೆ/ಪತ್ರ ಸಂಖ್ಯೆ ಮತ್ತು ದಿನಾಂಕಗಳನ್ನು ಸ್ಪಷ್ಟವಾಗಿ ನಮೂದಿಸಿ, ವರದಿಯನ್ನು ನೀಡಲು ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.

## III. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟ್:ಸಾ.ಸ.5:01(2020)**

**ವಿಷಯ:** ಶ್ರೀ ರವಿಚಂದ್ರ ಪಿ. ಎಂ., ಸಿಂಡಿಕೇಟು ಸದಸ್ಯರು, ವಿಶ್ವವಿದ್ಯಾನಿಲಯ ಸುಧಾರಣೆ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆ ಕುರಿತು.

**1.** ವಿಶ್ವವಿದ್ಯಾನಿಲಯದಲ್ಲಿ ಕಳೆದ 2 ವರ್ಷದಿಂದ ವಿವಿಧ ವಿಷಯಗಳಿಗೆ ಸಂಬಂಧಪಟ್ಟಂತೆ ರಚಿತವಾಗಿರುವ ತನಿಖಾ ಸಮಿತಿಗಳು ಎಷ್ಟು? ಅದರ ತನಿಖಾ ಪ್ರಗತಿಯ ವಿವರಗಳು.

**ನಿರ್ಣಯ:** ಈ ಬಗ್ಗೆ ಕಾರ್ಯಸೂಚಿಯೊಂದಿಗೆ ಲಗತ್ತಿಸಲಾದ ಪೂರಕ ಮಾಹಿತಿಯನ್ನು ಗಮನಿಸಲಾಯಿತು.

**2.** ವಿಶ್ವವಿದ್ಯಾನಿಲಯವನ್ನು "ವಿದ್ಯಾರ್ಥಿ ಸ್ನೇಹಿ", "ಕೌಶಲ್ಯಭರಿತ ವಿದ್ಯಾರ್ಥಿ" ಯನ್ನಾಗಿ ರೂಪಿಸಲು ಯೋಜನೆ.

ಸಿಂಡಿಕೇಟಿನ ಮಾನ್ಯ ಸದಸ್ಯರಾದ ಶ್ರೀ ರವಿಚಂದ್ರ ಪಿ. ಎಂ. ಇವರು ಮಂಗಳೂರು ವಿಶ್ವವಿದ್ಯಾನಿಲಯದ ಜೊತೆಗಿನ ತಮ್ಮ ಕನಸುಗಳನ್ನು ಹಂಚಿಕೊಂಡರು. ವಿಶ್ವವಿದ್ಯಾನಿಲಯವನ್ನು "ವಿದ್ಯಾರ್ಥಿ ಸ್ನೇಹಿ", "ಕೌಶಲ್ಯಭರಿತ ವಿದ್ಯಾರ್ಥಿ" ಯನ್ನಾಗಿ ರೂಪಿಸಲು ತಾವು ಹಾಕಿಕೊಂಡಿರುವ ಯೋಜನೆಗಳನ್ನು ಸಿಂಡಿಕೇಟು ಸಭೆಯಲ್ಲಿ ಪ್ರಸ್ತುತಪಡಿಸಿದರು.

1. **ವಿದ್ಯಾರ್ಥಿ ಅದಾಲತ್:** ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಮೂರು ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೊಂದರಂತೆ ವಿದ್ಯಾರ್ಥಿ ಅದಾಲತ್‌ಗಳನ್ನು ಸ್ಥಾಪಿಸಿ, ವರ್ಷಕ್ಕೆ ಒಂದು ಅಥವಾ ಎರಡು ಬಾರಿ ಅದಾಲತ್‌ಗಳನ್ನು ನಡೆಸಿದಲ್ಲಿ ನೇರವಾಗಿ ವಿದ್ಯಾರ್ಥಿಗಳ ಜೊತೆಗೆ ಸಂವಾದ ಕಾರ್ಯಕ್ರಮಗಳನ್ನು ನಡೆಸಲು ಅವಕಾಶ ಕಲ್ಪಿಸಬಹುದಾಗಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕುಲಪತಿಗಳು, ಕುಲಸಚಿವರು (ಆಡಳಿತ), ಕುಲಸಚಿವರು (ಪರೀಕ್ಷಾಂಗ) ಹಾಗೂ ಇತರೆ ಆಡಳಿತ ಸಿಬ್ಬಂದಿಗಳೊಂದಿಗೆ ನೇರವಾಗಿ ಸಂವಾದ ಕಾರ್ಯಕ್ರಮವನ್ನು ನಡೆಸಲು

ಸಾಧ್ಯವಾಗುತ್ತದೆ.

2. ಕಾಲೇಜುಗಳಲ್ಲಿ ದೂರು ಪೆಟ್ಟಿಗೆ ಸ್ಥಾಪಿಸುವುದು. ಇದರಿಂದ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳನ್ನು ನೇರವಾಗಿ ಹೇಳಿಕೊಳ್ಳಬಹುದಾಗಿರುತ್ತದೆ.
3. Call Centre ರೀತಿಯ ವ್ಯವಸ್ಥೆಯನ್ನು ವಿಶ್ವವಿದ್ಯಾನಿಲಯದಲ್ಲಿ ಜಾರಿಗೊಳಿಸಲು ಕ್ರಮ ಕೈಗೊಂಡಲ್ಲಿ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಸಹಕಾರಿಯಾಗುವುದು. Toll free number ನ್ನು ನೀಡಲು ಕ್ರಮ ಕೈಗೊಳ್ಳಬಹುದಾಗಿರುತ್ತದೆ.
4. ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಅಂತರ್ಜಾಲವನ್ನು (Dynamic Website) ಮಾರ್ಪಡಿಸುವುದು. ಇದರಿಂದ ವಿದ್ಯಾರ್ಥಿಗಳ ಸಂವಹನ ಕಾರ್ಯಕ್ಕೆ ಪ್ರಯೋಜನ ಉಂಟಾಗುತ್ತದೆ ಹಾಗೂ ಸಮಸ್ಯೆಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಬಹುದಾಗಿರುತ್ತದೆ.
5. ವಿದ್ಯಾರ್ಥಿಗಳು ಡ್ರಗ್ಸ್ ಹಾಗೂ ಇತರೆ ಮಾದಕ ವಸ್ತುಗಳಂತಹ ದುಶ್ಚಟ, ಸಾಮಾಜಿಕ ಪಿಡುಗುಗಳಿಗೆ ಬಲಿಯಾಗದಂತೆ ಜಾಗೃತಿ ವಹಿಸಲು ವರ್ಷಕ್ಕೊಂದರಂತೆ ವಿಶ್ವವಿದ್ಯಾನಿಲಯದ ಕ್ಯಾಂಪಸ್ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ಸ್ಥಳೀಯ ಪೊಲೀಸ್ ಇಲಾಖೆ ಹಾಗೂ ಇತರೆ ಸಂಸ್ಥೆಗಳ ಸಹಯೋಗದೊಂದಿಗೆ, ಈ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಜಾಗೃತಿ ಕಾರ್ಯಾಗಾರ ಹಮ್ಮಿಕೊಳ್ಳುವುದು.
6. ಪ್ರಮುಖ ದೂರವಾಣಿ ಸಂಖ್ಯೆಗಳು ಮತ್ತು ಮಿಂಚಂಚೆ (e-mail) ಗಳನ್ನು ಪ್ರತಿ ಕಛೇರಿ, ವಿಭಾಗ ಹಾಗೂ ಕಾಲೇಜುಗಳ ನೋಟೀಸ್ ಬೋರ್ಡುಗಳಲ್ಲಿ ಪ್ರಕಟಿಸಲು ಕ್ರಮಕ್ಕೈಗೊಳ್ಳುವುದು.
7. ಸ್ಥಳೀಯವಾಗಿ ಲಭ್ಯವಿರುವ ಸಂಶೋಧನಾ ವಿಷಯಗಳಲ್ಲಿ ಸಂಶೋಧನೆ ಮಾಡಲು ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವುದು. ಮುಂದಿನ ಹತ್ತು ವರ್ಷಗಳಲ್ಲಿ ಯಾವ ವಿಷಯದ ಅಧ್ಯಯನ ಮಾಡಬೇಕೆಂಬುದನ್ನು ಮನಗಂಡು ಈ ಬಗ್ಗೆ ಕಾರ್ಯಪ್ರವೃತ್ತರಾಗುವುದು. ಎಲ್ಲಾ ಕಾಲೇಜುಗಳಿಂದ ಅರ್ಹ ಸಂಶೋಧನಾ ಮಾರ್ಗದರ್ಶಕರ ನೇಮಕಾತಿ ಮಾಡುವುದು. ಸ್ಥಳಿಯ ಉದ್ಯೋಗ/ ಪರಿಸ್ಥಿತಿಗಳ ಬಗ್ಗೆ ಅಧ್ಯಯನ ಮಾಡಲು ಪ್ರೋತ್ಸಾಹಿಸುವುದು.
8. ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಬೆಳೆಸಿಕೊಳ್ಳುವ ಸಲುವಾಗಿ ಕಾಲೇಜುಗಳಲ್ಲಿ ಸೂಕ್ತ ನಿಯಮಾವಳಿಯೊಂದಿಗೆ, ಚುನಾವಣಾ ವ್ಯವಸ್ಥೆಯನ್ನು ಜಾರಿಗೆ ತರುವುದು.

**ನಿರ್ಣಯ:** ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದಿಂದ ಸದರಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಸೂಕ್ತ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು. ಸಭೆಗಳನ್ನು ನಡೆಸುವ ಸಂದರ್ಭದಲ್ಲಿ ಶ್ರೀ ರವಿಚಂದ್ರ ಪಿ.ಎಂ., ಮಾನ್ಯ ಸಿಂಡಿಕೇಟು ಸದಸ್ಯರು ಇವರನ್ನು ವಿಶೇಷ ಆಹ್ವಾನಿತರನ್ನಾಗಿ ಆಹ್ವಾನಿಸುವಂತೆ ನಿರ್ಣಯಿಸಲಾಯಿತು.

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಸಿಂಡಿಕೇಟ್:ಸಾ.ಸ.5:02(2020)** |
| **ವಿಷಯ:** | Bringing administrative reforms in the University system to make process Owners accountable ಎಂಬ ಪ್ರಸ್ತಾವನೆ ಕುರಿತು. |
| **ನಿರ್ಣಯ:** | ಮಾನ್ಯ ಸಿಂಡಿಕೇಟು ಸದಸ್ಯರಾದ ಪ್ರೊ. ಕರುಣಾರ್ ಎ. ಕೋಟೆಗಾರ್, ಇವರು ಸಲ್ಲಿಸಿರುವ ಪ್ರಸ್ತಾವನೆಯ ಅಂಶಗಳನ್ನು ಸವಿಸ್ತಾರವಾಗಿ ಸಭೆಗೆ ಪ್ರಸ್ತುತ ಪಡಿಸಿದರು. ವಿಸ್ತೃತ ಚರ್ಚೆಯ ಬಳಿಕ ಮಾನ್ಯ ಸದಸ್ಯರ ಪ್ರಸ್ತಾವನೆಗಳ ವಿಷಯಗಳನ್ನು ವಿಶ್ವವಿದ್ಯಾನಿಲಯದಲ್ಲಿ ಪರಿಣಾಮಕಾರಿಯಾಗಿ ಮತ್ತು ಪ್ರಯೋಜನಕಾರಿಯಾಗಿ ಅಳವಡಿಸಲು ಸಿಂಡಿಕೇಟು ಸದಸ್ಯರಾದ ಪ್ರೊ. ಡಿ. ಶಿವಲಿಂಗಯ್ಯ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ಸಿಂಡಿಕೇಟು ಸದಸ್ಯರಾದ ಶ್ರೀ ರವಿಚಂದ್ರ ಪಿ. ಎಂ., ಇವರನ್ನು ಸದರಿ ಸಮಿತಿಗೆ ಸದಸ್ಯರನ್ನಾಗಿ ನೇಮಿಸಿ, ಸಮಿತಿ ಸಭೆಗಳಿಗೆ ಅವಶ್ಯಕತೆಗನುಸಾರವಾಗಿ, ಸಿಂಡಿಕೇಟು ಸದಸ್ಯರಾದ ಪ್ರೊ. ಕರುಣಾಕರ್ ಎ. ಕೋಟೆಗಾರ್ ಇವರನ್ನು ವಿಶೇಷ ಆಹ್ವಾನಿತರನ್ನಾಗಿ ಆಹ್ವಾನಿಸಲು ಸಿಂಡಿಕೇಟು |

ನಿರ್ಣಯಿಸಿತು. ಕುಲಸಚಿವರು (ಆಡಳಿತ) ಇವರು ಸದರಿ ಸಮಿತಿಯ ಸಂಚಾಲಕರಾಗಿರುತ್ತಾರೆ.

**ಕಾರ್ಯಸೂಚಿ ಸಂಖ್ಯೆ:** **ಪಿಎಂಇಬಿ ಸಾ.ಸ.5:03(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ/ಕಚೇರಿಗಳಿಗೆ ಬೇಕಾಗಿರುವ Student Chairs, Stool, Table ಗಳನ್ನು ರೂಸಾ ಅನುದಾನದಿಂದ ಖರೀದಿಸುವ ಬಗ್ಗೆ.

**ನಿರ್ಣಯ:** ಮುಂದೂಡಲಾಯಿತು.

ಖರೀದಿ ಸಮಿತಿಗೆ ಮಂಡಿಸಿ, ನಂತರ ಸಿಂಡಿಕೇಟಿಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಪಿಎಂಇಬಿ ಸಾ.ಸ.5:04(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ/ಕಚೇರಿಗಳಿಗೆ ಬೇಕಾಗಿರುವ ಉಪಕರಣಗಳನ್ನು ರೂಸಾ ಅನುದಾನದಿಂದ ಖರೀದಿಸುವ ಬಗ್ಗೆ.

**ನಿರ್ಣಯ:** ಮುಂದೂಡಲಾಯಿತು.

ಖರೀದಿ ಸಮಿತಿಗೆ ಮಂಡಿಸಿ, ನಂತರ ಸಿಂಡಿಕೇಟಿಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ ಸಾ.ಸ.5:05(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಿಂದ ಶೈಕ್ಷಣಿಕ ವರ್ಷ 2014–15ನೇ ಸಾಲಿನಿಂದ ಸಂಗ್ರಹಿಸಿರುವ ಸಂಯೋಜನಾ/ಸೇವಾ ಶುಲ್ಕದ ಮೇಲೆ Service Tax ಹಾಗೂ ಶೈಕ್ಷಣಿಕ ವರ್ಷ 2017–18ನೇ ಸಾಲಿನಿಂದ ಸಂಗ್ರಹಿಸಿರುವ ಸಂಯೋಜನಾ/ಸೇವಾ ಶುಲ್ಕದ ಮೇಲೆ GST ಪಾವತಿಸುವ ಕುರಿತು.

**ನಿರ್ಣಯ:** ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಶ್ರೀ ಆರ್. ಕೆ. ಭಟ್ (IT Consultant) ಇವರು ನೀಡಿರುವ ಸಲಹೆ ಮತ್ತು ಶ್ರೀ ಎಸ್. ಎಸ್. ನಾಯಕ್ (Chartered Accountant) ಇವರುಗಳು ನೀಡಿರುವ ಸಲಹೆಗಳಂತೆ, ಸಂಯೋಜಿತ ಕಾಲೇಜುಗಳಿಂದ Indemnity Bond ಪಡೆಯಲು ಮತ್ತು ಮುಂದಿನ ಕ್ರಮಕ್ಕಾಗಿ ಅಪೀಲು ಮಾಡಬಹುದೆಂಬುದಾಗಿ ನಿರ್ಣಯಿಸಲಾಯಿತು.

ಮುಂದುವರಿದು, ಇದು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಸಂಬಂಧಿಸಿದ ವಿಷಯವಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಭೆಗೆ ಕಾರ್ಯಸೂಚಿ ಮಂಡಿಸಲು ಕ್ರಮಕೈಗೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ ಸಾ.ಸ.5:06(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕಚೇರಿಗಳಿಗೆ ಇಂಟರ್‌ನೆಟ್ ಅಳವಡಿಸಲು ಅಗತ್ಯವಿರುವ UTP/OFC Networking item ಗಳ ದರಗಳನ್ನು ಒಂದು ವರ್ಷದ ಅವಧಿಗೆ ನಿಗದಿಪಡಿಸಿ ಖರೀದಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ ಸಾ.ಸ.5:07(2020)**

**ವಿಷಯ:** ಭೌತಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯದ, DST FIST Programme – ಉಪಕರಣಗಳ ಖರೀದಿಯ ಪ್ರಸ್ತಾವನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ.5:08(2020)**

**ವಿಷಯ:** DST SERB ಪ್ರೊಜೆಕ್ಟ್, ಸೂಕ್ಷ್ಮಾಣು ಜೀವವಿಜ್ಞಾನ ವಿಭಾಗ, ಜ್ಞಾನಕಾವೇರಿ, ಚಿಕ್ಕ ಅಳುವಾರ – ಉಪಕರಣ ಖರೀದಿಯ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ.5:09(2020)**

**ವಿಷಯ:** 2020-21 ನೇ ಸಾಲಿಗೆ ಮಂಗಳೂರು ವಿಶ್ವವಿದ್ಯಾನಿಲಯದ ವೈ–ಫೈ ನೆಟ್‌ವರ್ಕಿಂಗ್ ಐಟಮ್‌ನ ವಾರ್ಷಿಕ ನಿರ್ವಹಣಾ ವೆಚ್ಚಕ್ಕೆ ಮಂಜೂರಾತಿ ನೀಡುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ.5:10(2020)**

**ವಿಷಯ:** ಗಣಕ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯದ 2020–21ನೇ ಸಾಲಿಗೆ ನೆಟ್ ವರ್ಕಿಂಗ್ ಐಟಮ್‌ನ ವಾರ್ಷಿಕ ನಿರ್ವಹಣ ವೆಚ್ಚಕ್ಕೆ ಮಂಜೂರಾತಿ ನೀಡುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ.5:11 (2020)**

**ವಿಷಯ:** ದೂರ ಶಿಕ್ಷಣ ಕೇಂದ್ರದ ಬಿ.ಎಡ್. ಒಡಿಯಲ್ ಕಾರ್ಯಕ್ರಮದ ಅಧ್ಯಯನ ಸಾಮಾಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡುವ ಟೆಂಡರ್ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ.5:12 (2020)**

**ವಿಷಯ:** DST SERB ಪ್ರಾಜೆಕ್ಟ್, ಜೀವರಸಾಯನಶಾಸ್ತ್ರ ವಿಭಾಗ, ಜ್ಞಾನ ಕಾವೇರಿ, ಚಿಕ್ಕ ಅಳುವಾರ – ಉಪಕರಣ ಖರೀದಿ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಎಸಿಸಿ ಸಾ.ಸ.5:13 (2020)**

**ವಿಷಯ:** ಶೈಕ್ಷಣಿಕ ವರ್ಷ 2020–21ನೇ ಸಾಲಿಗೆ ಕಾಲೇಜುಗಳ ಸಂಯೋಜನೆಯ ಕುರಿತು .

**ನಿರ್ಣಯ:** ಅಂಬಿಕಾ ಮಹಾ ವಿದ್ಯಾಲಯ, ಪುತ್ತೂರು, ಗ್ಲೋರಿಯಾ ಕಾಲೇಜು, ಪುತ್ತೂರು ಮತ್ತು ಮೇಧಾ ಕಾಲೇಜು, ಪುತ್ತೂರು ಈ ಮೂರು ಕಾಲೇಜುಗಳ ಸಂಯೋಜನೆ ಸಲುವಾಗಿ ಸ್ಥಳೀಯ ವಿಚಾರಣಾ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡಿದ್ದು, ಗ್ಲೋರಿಯಾ ಕಾಲೇಜು, ಪುತ್ತೂರು ಮತ್ತು ಮೇಧಾ ಕಾಲೇಜು ಪತ್ತೂರು ಈ ಎರಡು ವಿದ್ಯಾಸಂಸ್ಥೆಗಳಲ್ಲಿ ಕೆಲವೊಂದು ನ್ಯೂನತೆಗಳಿವುದಾಗಿ ಸ್ಥಳೀಯ ವಿಚಾರಣಾ ಸಮಿತಿಯು ತನ್ನ ವರದಿಯಲ್ಲಿ ತಿಳಿಸಿರುತ್ತದೆ. ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಸದರಿ ನ್ಯೂನತೆಗಳನ್ನು ತರಗತಿಗಳು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಸರಿಪಡಿಸಿಕೊಳ್ಳುವ ಷರತ್ತನ್ನು ಸದರಿ ವಿದ್ಯಾಸಂಸ್ಥೆಗಳಿಗೆ ವಿಧಿಸುವಂತೆ ಸಿಂಡಿಕೇಟು ನಿರ್ಣಯಿಸಿತು. ಹಾಗೂ ವಿಧಿಸಿರುವ ಷರತ್ತುಗಳನ್ನು ಪೂರೈಸಿದ ಬಗ್ಗೆ ಖಚಿತಪಡಿಸಿಕೊಳ್ಳಲು ತಜ್ಞರ ಸಮಿತಿಯನ್ನು ರಚಿಸಿ,

ಸಮಿತಿಯು ಕಾಲೇಜಿಗೆ ಭೇಟಿ ನೀಡಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪಿಎಂಇಬಿ ಸಾ.ಸ.5:14(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಾಲಯಕ್ಕೆ ಅಗತ್ಯವಿರುವ ಒಂದು ಸಂಖ್ಯೆಯ Ithenticate Turnitin Plagiarism Softwareನ ಖರೀದಿ ಪ್ರಸ್ತಾವನೆ ಬಗ್ಗೆ.
**ನಿರ್ಣಯ:** ಮುಂದೂಡಲಾಯಿತು.
ಖರೀದಿ ಸಮಿತಿಗೆ ಮಂಡಿಸಿ, ನಂತರ ಸಿಂಡಿಕೇಟಿಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.5:15(2020)
**ವಿಷಯ:** ಶ್ರೀ ರಾಘವೇಂದ್ರ. ಕೆ, ಪಂಪುಚಾಲಕ, ಇವರ ಪತ್ನಿ (ಶ್ರೀಮತಿ ಪ್ರತಿಭಾ) ಇವರ ವೈದ್ಯಕೀಯ ವೆಚ್ಚದ ಕುರಿತು ಎರಡನೇ ಬಾರಿ ಸಲ್ಲಿಸಿದ ಬಿಲ್ಲಿನ ಮೊತ್ತ ರೂ.2,27,198/– ಕ್ಕೆ ಅನುಮೋದನೆ ನೀಡುವ ಬಗ್ಗೆ
**ನಿರ್ಣಯ:** ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಅನುಮೋದಿಸಲಾಯಿತು. ಇದನ್ನು ಪೂರ್ವೋದಾರಣೆಯೆಂದು (precedent) ಪರಿಗಣಿಸತಕ್ಕದ್ದಲ್ಲ ಎಂದು ಸ್ಪಷ್ಟಪಡಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.5:16(2020)
**ವಿಷಯ:** ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮ 1963 (31, ಜನವರಿ 2011ರ ವರೆಗಿನ ತಿದ್ದುಪಡಿ ಆದೇಶದಂತೆ) ಹೊಸದಾಗಿ ಪರಿಷ್ಕರಣೆಗೊಂಡಿರುವ 2020ರ ದರಪಟ್ಟಿಯನ್ನು ಪರಿಗಣಿಸುವ ಬಗ್ಗೆ.
**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.5:17(2020)
**ವಿಷಯ:** ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿ Office of Research Integrity ನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸುವ ಬಗ್ಗೆ.
**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Office of Research Integrity ಯನ್ನು ಪ್ರಾರಂಭಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.5:18(2020)
**ವಿಷಯ:** ಶ್ರೀ ರಮೇಶ ಕೆ., ಸಿಂಡಿಕೇಟ್ ಸದಸ್ಯರು ಇವರು ಘಟಕ ಕಾಲೇಜುಗಳಲ್ಲಿ ಪ್ರಾಂಶುಪಾಲರ ನೇಮಕಾತಿಗೆ ಅನುಸರಿಸುವ ಮಾನದಂಡದ ಕುರಿತು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ.

1. **ಘಟಕ ಕಾಲೇಜುಗಳಲ್ಲಿ ಪ್ರಾಂಶುಪಾಲರ ನೇಮಕಾತಿಗೆ ಅನುಸರಿಸುವ ಮಾನದಂಡದ ಕುರಿತು.**

**ನಿರ್ಣಯ:** ಘಟಕ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರು/ಪ್ರಭಾರ ಪ್ರಾಂಶುಪಾಲರುಗಳ ಪೈಕಿ 5 ವರ್ಷಗಳ ಅವಧಿ ಮುಗಿದಿರುವ ಪ್ರಭಾರ ಪ್ರಾಂಶುಪಾಲರುಗಳನ್ನು ಪ್ರಾಂಶುಪಾಲರ ಪ್ರಭಾರದ ಕರ್ತವ್ಯದಿಂದ ಮುಕ್ತಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು. ನಿಯಮಾನುಸಾರ

ಮುಂದಿನ ಪ್ರಾಂಶುಪಾಲರು/ಪ್ರಭಾರ ಪ್ರಾಂಶುಪಾಲರುಗಳನ್ನು ನೇಮಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**2. ವಿಶ್ವವಿದ್ಯಾನಿಲಯದ ಬೋಧಕ, ಬೋಧಕೇತರ ಸಿಬ್ಬಂದಿಯವರಿಗೆ ಆರೋಗ್ಯ ವಿಮೆಯನ್ನು ಮಾಡಲು ಸಲಹೆಯನ್ನು ತೆಗೆದುಕೊಳ್ಳಲು IRDA (Insurance Bookers) Regulation 2002 ರ ಪ್ರಕಾರ (Insurance Regulatory and Development Authority ದಿನಾಂಕ 16 ಅಕ್ಟೋಬರ್ 2002, ನವದೆಹಲಿ ಇವರ ನೋಂದಾಯಿತ "UNISON Unparalleled Insurance Solutions, Bangalore" ಇವರನ್ನು ಉಚಿತವಾಗಿ ಸಲಹೆ ಕೊಡಲು ನೇಮಕ ಮಾಡುವ ಬಗ್ಗೆ ಚರ್ಚಿಸಿ ನಿರ್ಧರಿಸುವುದು.**

**ನಿರ್ಣಯ: ಈ ಬಗ್ಗೆ ಕಾರ್ಯಸೂಚಿ ಸಂಖ್ಯೆ: ಆಡಳಿತ ಸಾ.ಸ.5:22(2020)ರಲ್ಲಿ ನಿರ್ಣಯ ಕೈಗೊಳ್ಳಲಾಗುವುದು.**

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.5:19(2020)

**ವಿಷಯ:** ಮಂಗಳೂರು ತಾಲೂಕು ಮಂಗಳೂರು 'ಬಿ' ಹೋಬಳಿ ಕೊಣಾಜೆ ಗ್ರಾಮದ ಸ.ನಂಬ್ರ 113/ಪಿ1ರ 68.97 ಎಕ್ರೆ ಜಮೀನಿನ ಪಹಣಿ ಪತ್ರಿಕೆಯ ಕಲಂ 11 ರಲ್ಲಿನ ದಾಖಲಾತಿಯನ್ನು ಕಳಚುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾವನೆಯಲ್ಲಿ ತಿಳಿಸಿರುವ ಕೊಣಾಜೆ ಗ್ರಾಮದ ಸ.ನಂಬ್ರ 113/ಪಿ1ರ 68.97 ಎಕ್ರೆ ಜಮೀನು ಮಂಗಳೂರು ವಿಶ್ವವಿದ್ಯಾನಿಲಯದ ಒಟ್ಟಾರೆ ಬೆಳವಣಿಗೆಗೆ ಮತ್ತು ಭವಿಷ್ಯದ ಉಪಯೋಗಕ್ಕೆ ಅಗತ್ಯ ಎಂದು ಸಿಂಡಿಕೇಟು ಮನಗಂಡಿದೆ. ಈ ಹಿನ್ನೆಲೆಯಲ್ಲಿ ಸದ್ರಿ ಜಾಗವನ್ನು ಮಂಗಳೂರು ವಿಶ್ವವಿದ್ಯಾನಿಲಯದ ಹೆಸರಿಗೆ ಪೂರ್ಣವಾಗಿ ಮಂಜೂರು ಮಾಡಲು ಸರ್ಕಾರವನ್ನು ಕೋರಲು ಸರ್ವಾನುಮತದಿಂದ ನಿರ್ಣಯಿಸಲಾಯಿತು. ಹಾಗೂ ಈ ಬಗ್ಗೆ ಅಗತ್ಯವಾದ ನಿಯಮಾನುಸಾರವಾದ ಕ್ರಮಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.5:20(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರದಲ್ಲಿ ವೈದ್ಯರೊಬ್ಬರ ಸೇವೆಯನ್ನು ತಾತ್ಕಾಲಿಕ ನೆಲೆಯಲ್ಲಿ ಭರ್ತಿಗೊಳಿಸುವ ಬಗ್ಗೆ.

**ನಿರ್ಣಯ:** COVID - 19 ಈ ಸಂದಿಗ್ಧ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರದಲ್ಲಿ ವೈದ್ಯರೊಬ್ಬರ ಸೇವೆಯನ್ನು ತಾತ್ಕಾಲಿಕ ನೆಲೆಯಲ್ಲಿ ನಿಯಮಾನುಸಾರ ನೇಮಕಾತಿ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಮುಂದುವರಿದು, ಆರೋಗ್ಯ ಕೇಂದ್ರದಲ್ಲಿ ತಾಂತ್ರಿಕ ಆರೋಗ್ಯ ಸಿಬ್ಬಂದಿಯನ್ನು ತಾತ್ಕಾಲಿಕ ನೆಲೆಯಲ್ಲಿ ನಿಯಮಾನುಸಾರ ನೇಮಕಾತಿ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಅಗತ್ಯವಿದ್ದಲ್ಲಿ ಸದರಿ ಸಿಬ್ಬಂದಿಯ ಸೇವೆಯನ್ನು ವಿಶ್ವವಿದ್ಯಾನಿಲಯದ ಇತರ ಪ್ರಯೋಗಾಲಯಗಳಿಗೆ ಬಳಸಿಕೊಳ್ಳಬಹುದೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾ.ಸ.5:21(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿನಿಯ ದೂರಿನ ಕುರಿತು ICC ವರದಿಯನ್ನು ಮಂಡಿಸುವ ಬಗ್ಗೆ.

**ನಿರ್ಣಯ:** ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ಕೊನೆಯಲ್ಲಿ ನಿಯಮಾನುಸಾರ ಸೂಕ್ತ

ಶಿಸ್ತುಕ್ರಮ ಕೈಗೊಳ್ಳಲು ಸಿಂಡಿಕೇಟು ನಿರ್ಣಯಿಸಿತು. ಈ ಪ್ರಕರಣದ ವರದಿಯನ್ನು ಅನುಷ್ಠಾನಕ್ಕೆ ತರುವಲ್ಲಿ ವಿಫಲರಾಗಿ ತನ್ನ ಕರ್ತವ್ಯ ಚ್ಯುತಿ ಎಸಗಿರುವ ಸಂಬಂಧಿತ ಅಧಿಕಾರಿಗಳನ್ನು ಗುರುತಿಸಿ, ಅವರ ವಿರುದ್ಧ ಸೂಕ್ತ ಕಾನೂನು ಶಿಸ್ತುಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.5:22(2020)

**ವಿಷಯ:** ವಿಶ್ವವಿದ್ಯಾನಿಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ ಆರೋಗ್ಯ ವಿಮೆ ಮಾಡುವ ಕುರಿತು ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ರಮೇಶ ಕೆ., ಇವರ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಈ ಬಗ್ಗೆ ಸಾರ್ವಜನಿಕ ಕ್ಷೇತ್ರದ ವಿಮಾ ಕಂಪನಿಗಳಿಂದ Expression Of Interest (EOI) ಸ್ವೀಕರಿಸಿ, ಉತ್ಪನ್ನಗಳ ಮಾಹಿತಿ ಪಡೆದು, ವಿಶ್ವವಿದ್ಯಾನಿಲಯದ ನೌಕರರಿಗೆ ಈ ಬಗ್ಗೆ ಮಾಹಿತಿ ನೀಡಿ, ಅಂತಿಮ ನಿರ್ಧಾರಕ್ಕಾಗಿ ಸಿಂಡಿಕೇಟಿಗೆ ಪ್ರಸ್ತಾವನೆ ಮಂಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.5:23(2020)

**ವಿಷಯ:** 2020–21ನೇ ಸಾಲಿನಲ್ಲಿ ಪದವಿ ಮತ್ತು ಸ್ನಾತಕೋತ್ತರ ವಿಭಾಗಗಳಲ್ಲಿ ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಳ್ಳುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಯಾವುದೇ ಕಾಲೇಜಿನಲ್ಲಿ ಪೂರ್ಣಕಾಲಿಕ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರನ್ನು ಅತಿಥಿ ಉಪನ್ಯಾಸಕರಾಗಿ ನೇಮಕ ಮಾಡುವಂತಿಲ್ಲ ಎಂದು ಸಿಂಡಿಕೇಟು ನಿರ್ಣಯಿಸಿತು. ಅತಿಥಿ ಉಪನ್ಯಾಸಕರ ನೇಮಕಾತಿ ಆದೇಶದಲ್ಲಿ ಈ ಷರತ್ತನ್ನು ಸ್ಪಷ್ಟವಾಗಿ ನಮೂದಿಸುವಂತೆ ಕ್ರಮ ಕೈಗೊಳ್ಳಲು ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ.5:24(2020)

**ವಿಷಯ:** ಶೈಕ್ಷಣಿಕ ವರ್ಷ 2020–21ನೇ ಸಾಲಿಗೆ ಹೊಸ ಸಂಯೋಜನೆ/ವಿಸ್ತರಣಾ ಸಂಯೋಜನೆ ನೀಡುವ ಕುರಿತು.

**ನಿರ್ಣಯ:** ಶೈಕ್ಷಣಿಕ ವರ್ಷ 2020–21ನೇ ಸಾಲಿಗೆ ಹೊಸ ಸಂಯೋಜನೆ/ವಿಸ್ತರಣಾ ಸಂಯೋಜನೆಯನ್ನು ನೀಡುವ ಬಗ್ಗೆ ಕಾಲೇಜುವಾರು ಸ್ಥಳೀಯ ವಿಚಾರಣಾ ಸಮಿತಿಯು ನೀಡಿರುವ ವರದಿ ಮತ್ತು ಶೈಕ್ಷಣಿಕ ಮಂಡಳಿಯ ಗೊತ್ತುವಳಿಗಳನ್ನು ಪರಿಗಣಿಸಿ, ಕಾಲೇಜುಗಳ ಹೊಸ ಸಂಯೋಜನೆ/ವಿಸ್ತರಣಾ ಸಂಯೋಜನೆಗಳಿಗೆ ಸಂಬಂಧಿಸಿ, ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲು ಸೂಕ್ತ ಕ್ರಮಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

- **ಇತರ ವಿಷಯಗಳು:**

1. ಅತಿಥಿ ಉಪನ್ಯಾಸಕರ ಶೈಕ್ಷಣಿಕ ವರ್ಷ 2019–20ರ ಮುಂದುವರಿದ ಅವಧಿಗೆ ವೇತನದ ಪಾವತಿ ಕುರಿತು ಸರ್ಕಾರಕ್ಕೆ ಪತ್ರ ಬರೆಯಬೇಕೆಂಬುದಾಗಿ ನಿರ್ಣಯಿಸಲಾಯಿತು. ಈ ಬಗ್ಗೆ ಸರ್ಕಾರದ ನಿರ್ದೇಶನದಂತೆ ಕ್ರಮಕೈಗೊಳ್ಳುವುದಾಗಿ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

2. COVID-19ರ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ಶೈಕ್ಷಣಿಕ ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ದಂಡಶುಲ್ಕ ಸಂಗ್ರಹಿಸಲಾಗುವುದಿಲ್ಲ ಎಂಬ ಮಾಹಿತಿಯನ್ನು ಮಾನ್ಯ ಕುಲಪತಿಗಳು ಸಿಂಡಿಕೇಟು ಸದಸ್ಯರ ಗಮನಕ್ಕೆ ತಂದರು. ಮುಂದುವರಿದು, ಯಾವುದೇ ವಿದ್ಯಾರ್ಥಿಗೆ ಏಕ

ಕಂತಿನಲ್ಲಿ ಶುಲ್ಕ ಪಾವತಿಸಲು ಕಷ್ಟಸಾಧ್ಯವಾದರೆ ಎರಡು ಕಂತುಗಳಲ್ಲಿ ಶುಲ್ಕ ಪಾವತಿ ಮಾಡಲು ಅವಕಾಶ ಕಲ್ಪಿಸಿರುವುದಾಗಿಯೂ ತಿಳಿಸಿದರು.

3. ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಲಾಗಿರುವ ಒಟ್ಟು ಸಿ.ಸಿ.ಟಿ.ವಿಗಳ ಸಂಖ್ಯೆ ಹಾಗೂ ಸದರಿ ಸಿ.ಸಿ.ಟಿ.ವಿಗಳ ಸ್ಥಿತಿಗತಿಗಳ ಬಗ್ಗೆ ವರದಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸುವುದು.
4. ವಿಶ್ವವಿದ್ಯಾನಿಲಯದಲ್ಲಿ ಬಿ.ಎಡ್. (ODL), ಎಂ.ಎಡ್ ಕಾರ್ಯಕ್ರಮಗಳಿದ್ದು, ಸದರಿ ಕಾರ್ಯಕ್ರಮಗಳಿಗೆ ಖಾಯಂ ಸಿಬ್ಬಂದಿಗಳ ಕೊರತೆ ಇರುತ್ತದೆ. ಖಾಯಂ ಸಿಬ್ಬಂದಿಗಳ ಕೊರತೆಗಳಿರುವ ಇತರೆ ಕಾರ್ಯಕ್ರಮಗಳಿಗೂ ಅನ್ವಯಿಸಿ, ಪ್ರತಿಯೊಂದು ವಿಭಾಗ/ಕಾರ್ಯಕ್ರಮಕ್ಕೆ ಕನಿಷ್ಠ ಒಬ್ಬರಾದರೂ ಖಾಯಂ ಸಿಬ್ಬಂದಿ ಕಾರ್ಯನಿರ್ವಹಿಸುವಂತೆ ವಿಶ್ವವಿದ್ಯಾನಿಲಯದ ಆಡಳಿತ ವರ್ಗವು ಈ ಬಗ್ಗೆ ಕಾರ್ಯಪ್ರವೃತ್ತರಾಗಬೇಕೆಂಬುದಾಗಿ ಸಿಂಡಿಕೇಟಿನ ಮಾನ್ಯ ಸದಸ್ಯರಾದ ಡಾ. ಎಂ. ಎಸ್. ತಳವಾರ್ ತಿಳಿಸಿದರು. ಈ ಬಗ್ಗೆ ಮಾನ್ಯ ಕುಲಪತಿಗಳು ವಿವರಣೆ ನೀಡುತ್ತಾ, ಮಂಜೂರಾದ ಹುದ್ದೆಗಳನ್ನು ಸರ್ಕಾರದ ಆದೇಶದಂತೆ ಭರ್ತಿಗೊಳಿಸಲಾಗುವುದು ಅಥವಾ ನಿಯೋಜಿಸಲಾಗುವುದು ಎಂದು ತಿಳಿಸಿದರು.
5. ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿ ತಾಂತ್ರಿಕ ಸಮಿತಿಯ ವರದಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲಾಗುವುದೆಂದು ಕುಲಸಚಿವರು (ಪರೀಕ್ಷಾಂಗ) ಇವರು ತಿಳಿಸಿದರು.
6. ಉಪಕರಣಗಳ ಖರೀದಿ ಪ್ರಕ್ರಿಯೆಗೆ ಸಂಬಂಧಿಸಿ, ಸಿಂಡಿಕೇಟು ಸಭೆಗೆ ಮಂಡಿಸುವ ಬಹುತೇಕ ಕಾರ್ಯಸೂಚಿಗಳಲ್ಲಿ, ಎರಡನೇ ಬಾರಿ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಣೆ ನೀಡಿದರೂ, ಏಕೈಕ ಸಂಸ್ಥೆಯವರು ದರಪಟ್ಟಿ ಸಲ್ಲಿಸಿರುವುದನ್ನು ಸಿಂಡಿಕೇಟು ಗಮನಿಸಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಪಾರದರ್ಶಕತೆ ತರಲು ಮತ್ತು ಟೆಂಡರು ಪ್ರಕ್ರಿಯೆಯಲ್ಲಿ ಸಮಗ್ರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು ಸರಬರಾಜುದಾರರು ಮತ್ತು ಮಾರಾಟಗಾರರ ಪಟ್ಟಿಯನ್ನು ತಯಾರಿಸುವುದು ಅತೀ ಅಗತ್ಯ ಎಂದು ಸಿಂಡಿಕೇಟು ಮನಗಂಡಿದೆ. ಆದುದರಿಂದ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸರಬರಾಜುದಾರರು ಮತ್ತು ಮಾರಾಟಗಾರರ ಪಟ್ಟಿಯನ್ನು ತಯಾರಿಸಿ, ಮುಂದೆ ನಡೆಯುವ ಟೆಂಡರ್ ಪ್ರಕ್ರಿಯೆ ಬಗ್ಗೆ ಮಾಹಿತಿಯನ್ನು ನೀಡಲು ಸಿಂಡಿಕೇಟು ನಿರ್ಣಯಿಸಿತು. ಇ–ಟೆಂಡರ್‌ಗೆ ಪೂರಕವಾಗಿ ಮತ್ತು ಸರಬರಾಜುದಾರರು ಮತ್ತು ಮಾರಾಟಗಾರರ ಪಟ್ಟಿಯನ್ನು ನೋಂದಾಯಿಸಿಕೊಳ್ಳುವ ಒಂದು ವ್ಯವಸ್ಥೆಯನ್ನು ಪರಿಚಯಿಸಲು ಸಹ ನಿರ್ಣಯಿಸಲಾಯಿತು. ಟೆಂಡರು ಪ್ರಕ್ರಿಯೆಯಲ್ಲಿ standard tender procurement process ನ್ನು ಅಳವಡಿಸುವುದು.
7. ಶಿಕ್ಷಕರ/ವಿದ್ಯಾರ್ಥಿಗಳ ಕುಂದುಕೊರತೆಗಳ ನಿವಾರಣೆಗಾಗಿ ವಿಶ್ವವಿದ್ಯಾನಿಲಯಲದ ಜಾಲತಾಣದಲ್ಲಿ ಒಂದು ಲಿಂಕ್‌ನ್ನು ಸ್ಥಾಪಿಸುವುದು. ಯುಜಿಸಿಯ S. G. Portal ಗೆ ನಮ್ಮ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಒಂದು ಲಿಂಕ್‌ನ್ನು ನೀಡುವಂತೆ ಕ್ರಮಕ್ಕೈಗೊಳ್ಳುವುದು.
8. ವಿಶ್ವವಿದ್ಯಾನಿಲಯದ ಹಣಕಾಸು ವಿಷಯಗಳಿಗೆ ಸಂಬಂಧಿಸಿ ಒಬ್ಬ certified finance advisor ನ ಅವಶ್ಯಕತೆ ಇರುತ್ತದೆ ಮತ್ತು ವಿಶ್ವವಿದ್ಯಾನಿಲಯದ ಕಾನೂನು ವಿಷಯಗಳಿಗೆ ಸಂಬಂಧಿಸಿ ಒಬ್ಬ Legal advisor ನ ಅವಶ್ಯಕತೆ ಇರುತ್ತದೆ. ಈ ಬಗ್ಗೆ ನಿವೃತ್ತ ನ್ಯಾಯಾಧೀಶರನ್ನು ಸಹ ಆದ್ಯತೆಯ ಮೇರೆಗೆ ಬಳಸಿಕೊಳ್ಳಬಹುದೆಂದು ಸಿಂಡಿಕೇಟು ನಿರ್ಣಯಿಸಿತು. ಒಬ್ಬ ನುರಿತ external auditorನ ಅವಶ್ಯಕತೆಯಿದ್ದು, ವಿಶ್ವವಿದ್ಯಾನಿಲದಲ್ಲಿ periodic audit ಕಾರ್ಯವನ್ನು ನಡೆಸುವಂತೆ ಕ್ರಮ ಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.
9. ಮಾನ್ಯ ಸಿಂಡಿಕೇಟು ಸದಸ್ಯರಾದ ಪ್ರೊ. ಕರುಣಾಕರ ಎ.ಕೋಟೆಗಾರ್, ಇವರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿ, ಸ್ನಾತಕೋತ್ತರ ಕನ್ನಡ ವಿಭಾಗದಲ್ಲಿ ನಡೆದ ಪರೀಕ್ಷೆಗಳಿಗೆ ಸಂಬಂಧಿಸಿ, ನಡೆದ ಲೋಪದ ಕುರಿತು ತನಿಖೆ ನಡೆಸಲು ಮಾನ್ಯ ಕುಲಪತಿಗಳ ಆದೇಶದಂತೆ ಆಂತರಿಕ ವಿಚಾರಣಾ ಸಮಿತಿಯನ್ನು ರಚಿಸಲಾಗಿದೆ. ಸಮಿತಿ ಸಭೆಯನ್ನು ಶೀಘ್ರದಲ್ಲಿ ನಡೆಸಿ, ಸಮಿತಿಯ ವರದಿಯನ್ನು ಮುಂದಿನ ಸಿಂಡಿಕೇಟು

ಸಭೆಗೆ ಮಂಡಿಸಲಾಗುವುದು ಎಂದು ಕುಲಸಚಿವರು (ಪರೀಕ್ಷಾಂಗ) ಇವರು ತಿಳಿಸಿದರು.

10. ದಿನಾಂಕ 14.07.2020ರಂದು ನಡೆದ ಸಿಂಡಿಕೇಟು ಸಭೆಯ ಕಾರ್ಯಸೂಚಿ ಸಂಖ್ಯೆ: ಕಾನೂನು ಘಟಕ ಸಾಸ3:07 (2020) ರ ಅನುಸರಣಾ ವರದಿಗೆ ಸಂಬಂಧಿಸಿ, ಪ್ರೊ. ಎ. ಎಂ. ಖಾನ್, ಇವರು ಕೊಟ್ಟ ಉತ್ತರವು ಆಕ್ಷೇಪಣಾರ್ಹವಾಗಿರುವುದೆಂದು ಸಿಂಡಿಕೇಟಿನ ಮಾನ್ಯ ಸದಸ್ಯರಾದ ಡಾ. ಪಾರ್ವತಿ ಅಪ್ಪಯ್ಯ ಇವರು ತಿಳಿಸಿದ ಹಿನ್ನೆಲೆಯಲ್ಲಿ, ಈ ಬಗ್ಗೆ ಪ್ರೊ. ಎ. ಎಂ. ಖಾನ್, ಇವರಿಂದ ವಿವರಣೆ ಪಡೆದು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಕ್ರಮಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.
11. ಸಿಂಡಿಕೇಟು ಸಭೆಗಳಿಗೆ ಸಂಬಂಧಿಸಿ, ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.
    a. ಸಿಂಡಿಕೇಟು ಸಭೆಗಳನ್ನು ಪೂರ್ವಾಹ್ನ 10.00 ಗಂಟೆಗೆ ಸರಿಯಾಗಿ ನಡೆಸಲು ಸೂಕ್ತ ಕ್ರಮ ಕೈಗೊಳ್ಳುವುದು.
    b. ನವೆಂಬರ್ 2020 ರಿಂದ ಪ್ರತಿ ತಿಂಗಳ ಮೂರನೇ ಶನಿವಾರದಂದು ಸಿಂಡಿಕೇಟು ಸಭೆಗಳನ್ನು ನಡೆಸಲು ಕ್ರಮ ಕೈಗೊಳ್ಳುವುದು.
    c. ಸಿಂಡಿಕೇಟು ಸಭೆಗಳಿಗೆ ಮಂಡಿಸುವ ಕಾರ್ಯಸೂಚಿಗಳನ್ನು ಸಾಕಷ್ಟು ದಿನ ಮುಂಚಿತವಾಗಿ ಸದಸ್ಯರುಗಳಿಗೆ ರವಾನಿಸಲು ಕ್ರಮ ಕೈಗೊಳ್ಳುವುದು. ಮುಂದಿನ ಸಭೆಗಳಿಂದ ತುರ್ತು ಸಂದರ್ಭಗಳನ್ನು ಹೊರತುಪಡಿಸಿ, ಯಾವುದೇ Table Agenda ಗಳನ್ನು ಸಿಂಡಿಕೇಟು ಸಭೆಗಳಿಗೆ ಮಂಡಿಸುವಂತಿಲ್ಲ ಎಂದು ಸಿಂಡಿಕೇಟು ನಿರ್ಣಯಿಸಿತು.
    d. ಸಿಂಡಿಕೇಟು ಸಭೆಗೆ ಮಂಡಿಸಬೇಕಾಗಿರುವ ವಿಷಯಗಳನ್ನು ಕಾರ್ಯಸೂಚಿ ಮಂಡಿಸಿ, ಸಿಂಡಿಕೇಟು ಅನುಮೋದನೆ ಪಡೆದುಕೊಂಡೇ ಕಾರ್ಯರೂಪಕ್ಕೆ ತರಲು ಸೂಚಿಸಲಾಗಿದೆ. ಯಾವುದೇ ಕಾರ್ಯಸೂಚಿಗಳನ್ನು ಘಟನೋತ್ತರ ಮಂಜೂರಾತಿ/ಅನುಮೋದನೆಗಾಗಿ ಮಂಡಿಸುವುದಾದಲ್ಲಿ ಸೂಕ್ತ ಸಮರ್ಥನೆಯೊಂದಿಗೆ ಮಂಡಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.
    e. ಕಾರ್ಯಸೂಚಿಗಳನ್ನು ವಿಷಯವಾರು ಸಂಯೋಜಿಸಿ ನೀಡುವುದು.
12. ಮುಂದಿನ ಶೈಕ್ಷಣಿಕ ವರ್ಷಗಳಿಂದ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಗೆ ಸಂಬಂಧಿಸಿ, ಸ್ನಾತಕ ಕಾರ್ಯಕ್ರಮಗಳ ಪ್ರವೇಶಾತಿಯ ಕೌನ್ಸೆಲಿಂಗ್‌ನ್ನು ಶೈಕ್ಷಣಿಕ ವರ್ಷ 2021–22ನೇ ಸಾಲಿನಿಂದ ಕೇಂದ್ರೀಕೃತಗೊಳಿಸಲು ಕ್ರಮಕೈಗೊಳ್ಳುವಂತೆ ನಿರ್ಣಯಿಸಲಾಯಿತು.
13. ಪ್ರೊ. ಗಣೇಶ್ ಸಂಜೀವ್ ಇವರನ್ನು ಮುಂದಿನ ಸಿಂಡಿಕೇಟು ಸಭೆಗೆ ಆಹ್ವಾನಿಸಿ, ಸಂಶೋಧನೆ ಮತ್ತು ಅಭಿವೃದ್ಧಿ ಬಗ್ಗೆ ವರದಿಯನ್ನು ಸಂಕ್ಷಿಪ್ತವಾಗಿ ಪ್ರಸ್ತುತ ಪಡಿಸಲು ಸೂಚಿಸುವಂತೆ ನಿರ್ಣಯಿಸಲಾಯಿತು.
14. ದಿನಾಂಕ 19.10.2020ರಂದು ನಿಗದಿಯಾಗಿದ್ದ ಸಿಂಡಿಕೇಟು ಸಭೆಯನ್ನು ದಿನಾಂಕ 28.10.2020ರಂದು ನಡೆಸಲು ಸೂಕ್ತ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

ಮಾನ್ಯ ಕುಲಪತಿಗಳು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು. |